ಈ ವಾರದ ಓದು...

**ನನ್ನಿ** ಕಾದಂಬರಿ

ಕರಣಂ ಪವನ್ ಪ್ರಸಾದ್

# ಸೇವೆ ಎಂಬ ಸೋಗು ಹಾಕುವ ಕ್ರೈಸ್ತ ಮಿಷನರಿಗಳು

ಮದರ್ ಎಲಿಸಾರ ಮಾನಸಿಕ ಸ್ವಾಸ್ಥ್ಯದ ಬಗ್ಗೆ ಒಬ್ಬ ಕ್ಯಾಥೋಲಿಕ್ಕಳಾಗಿ ನನಗೇ ಆತಂಕ ಮೂಡಿತು. ನಾನೇ ಇದಕ್ಕೂ ಮುಂಚೆ, ಹೋದ ವರ್ಷದಲ್ಲಿ ಸಾವಿರ ಪೌಂಡ್ ದಾನ ಮಾಡಿದ್ದೆ. ಈ ರೀತಿ ಎಷ್ಟು ಜನ ನೀಡಿದ್ದಾರೆ. ವೈದ್ಯಕೀಯ ಚಿಕಿತ್ಸೆ ನೀಡಿ ಎಂದು ದಬಾಯಿಸಬೇಕು ಎಂದುಕೊಂಡೆ. ಕ್ರಿಸ್ತನ ಮುಖ ನೋಡಿಕೊಂಡು ಸುಮ್ಮನಾದೆ. ಸಿಎಂಸಿಯ ನನ್‌ಗಳು ಕ್ಯಾನ್ಸರ್ ಇರುವ ರೋಗಿಗಳಿಗೆ ಆಸ್ಪಿರಿನ್ ಮಾತ್ರೆಗಳನ್ನು, ಕ್ಷಯರೋಗಿಗಳಿಗೆ ಲಿಂಕ್ಟಸ್ ಸಿರಪ್‌ನ್ನು ನೀಡುತ್ತಿದ್ದರು! ಅವರಿಗೆ ಹಲವಾರು ಬಾರಿ ಬಳಸಿದ ತಣ್ಣನೆ ನೀರಿನಲ್ಲಿ ತೊಳೆದ ಸೂಜಿಗಳ ಮೂಲಕ ಗ್ಲೂಕೋಸ್ ನೀಡಲಾಗುತ್ತಿತ್ತು. ಒಂದು ಉತ್ತಮವಾದ ಕ್ಯಾಥೋಲಿಕ್ ಸಂಸ್ಕಾರ ಕೂಡ ಹೆಣಗಳಿಗೆ ಸಿಗುತ್ತಿರಲಿಲ್ಲ. ಇದರ ಬಗ್ಗೆ ಅಲ್ಲಿದ್ದ ನನ್‌ಗಳನ್ನು ಕೇಳಿದ್ದೆ. ''ಇಷ್ಟು ಜನಕ್ಕೆ ಹೊಸ ಸೂಜಿ ತರಲಿಕ್ಕೆ ಆಗತ್ತ?'' ಎಂದು ಮೂದಲಿಸಿಬಿಟ್ಟರು.ಹೆಚ್ಚು ಎಂದರೆ ರೋಗಿಗಳಿಗೆ ಬ್ರೂಫಿನ್ ಸಿಗುತ್ತಿತ್ತು, ಅಷ್ಟೇ. ಒಂದು ಕ್ಯಾಬ್ ಮೂಲಕ ಆಸ್ಪತ್ರೆಗೆ ಸಾಗಿಸಲು ಇವರಲ್ಲಿ ದುಡ್ಡಿಲ್ಲವೇ? ಅಮೆರಿಕಾದಿಂದ ಯೂರೋಪಿನಿಂದ ಬರುವ ಡಾಲರ್, ಪೌಂಡ್‌ಗಳು ಏನಾಗುತ್ತಿದೆ? ನಾರ್ಥ್ ಅಮೆರಿಕಾ ಕಡೆಯ ಸರ್ವಾಧಿಕಾರಿಯ ದಾನದ ಹಣ ಎಲ್ಲಿ ಖರ್ಚಾಗುತ್ತಿದೆ? ಎಂದು ತಿಳಿಯಲೇ ಇಲ್ಲ....

ಸಿ.ರೋಣಾಳಿಗೆ ಸಿಟ್ಟು ಏರಿ ಬಂದು ಪತ್ರವನ್ನು ಪಕ್ಕಕ್ಕೆ ಎಸೆದಳು. ಮುಂದೇ ಇದೇ ರೀತಿಯಾದ ಟೀಕೆಟಿಪ್ಪಣಿ ಅದರಲ್ಲಿತ್ತು. ''ಇವಳಾರೋ ಕಮ್ಯೂನಿಸ್ಟ್ ಇರಬೇಕು. ಬೇಕೆಂತಲೇ ಹೀಗೆ ಬರೆದಿದ್ದಾಳೆ. ನಮ್ಮ ಕಷ್ಟ ನಮಗೆ ಗೊತ್ತು ಮದರ್ ಎಲಿಸಾರ ಬಗ್ಗೆ ಹೀಗೆ ಮಾತಾಡಲು ಇವಳಿಗೇನು ಅರ್ಹತೆ?'' ತನ್ನಲ್ಲೇ ಪ್ರಶ್ನೆ ಹಾಕಿಕೊಂಡಳು.ಕ್ಷಣದನಂತರ''ಸರಿ,ಸರಿಯಾದದ್ದುಏನೂಬರೆದಿಲ್ಲ.ತಪ್ಪುಗಳನ್ನು ಮಾತ್ರ ಬರೆದಿದ್ದಾಳೆ. ಆದರೆ ಅವಳು ತಪ್ಪು ಗುರುತಿಸುವುದೆಲ್ಲಾ ಸತ್ಯವೇ ಅಲ್ಲವೇ? ನಾನು ಕಂಡಿರುವುದನ್ನೇ ಅವಳೂ ಬರೆದಿದ್ದಾಳೆ'' ಎಂದು ಅವಳಿಗನ್ನಿಸಿದಾಗ ಎದೆ ನಡುಗಿದಂತೆ ಅವಳಿಗೆ ಭಾಸವಾಯಿತು. ಆದಾಗಲೇ ಬ್ರಿಟಿಷ್ ಮ್ಯಾಗಜೀನಿನ ಈ ಪ್ರತಿಗಳನ್ನು ಯೂರೋಪಿನಲ್ಲಿ ಮುಟ್ಟುಗೋಲು ಹಾಕಲಾಗಿದೆ ಎಂದು ಫಾಬ್ರಿಗಾಸ್ ಇವಳಿಗೆ ತಿಳಿಸಿದ್ದ. ಖುದ್ದಾಗಿ ಸಿಎಂಸಿಗೆ ಪತ್ರ ಕಳಿಸಿದ್ದಾಳೆಂದರೆ ಎಂಥ ಧೂರ್ತೆ ಅವಳಿರಬೇಕು ಎಂದು ಸಿ. ರೋಣ ತನ್ನ ಆಲೋಚನೆಯ ಮಗ್ಗುಲನ್ನು ಬದಲಿಸಿದಳು. ಈ ಸಂದರ್ಭದಲ್ಲಿ ತಂಡೋಪತಂಡವಾಗಿ ಪತ್ರಿಕೆಯವರು, ಟಿವಿಯವರು ಶಿಶುಮಂದಿರದ ಒಳಗೆ ನುಗ್ಗಿದ್ದು ಗೇಟಿನ ಬಳಿಯೇ ಕಛೇರಿ ಇರುವ ರೋಣಾಳಿಗೆ ಗಮನಕ್ಕೆ ಬಂತು. ಭಾರತೀಯ ಮಾಧ್ಯಮದವರು ಇದ್ದಂತಿರಲಿಲ್ಲ. ಕಲ್ಕತ್ತೆ ಇದಾವುದೂ ನನಗೆ ಸಂಬಂಧಪಟ್ಟಿಲ್ಲ ಎಂಬಂತೆ ಚಟುವಟಿಕೆಯಲ್ಲಿತ್ತು. ರೋಣ ದಡಕ್ಕನೇ ಎದ್ದು ಈಚೆ ನಡೆದಳು.

ಇದ್ದವರಲ್ಲೇ ಎತ್ತರದ ವ್ಯಕ್ತಿಯೊಬ್ಬ ಗಡುಸಾದ ಧ್ವನಿಯಲ್ಲಿ ''ನಾರ್ಥ್ ಅಮೆರಿಕನ್ ದ್ವೀಪದ ಫಾಸಿಸ್ಟ್ ಸರ್ವಾಧಿಕಾರಿಯು ನಿಮಗೆ ಹಣ ನೀಡುತ್ತಾನೆ. ಅದು ಡ್ರಗ್ ಮಾಫಿಯಾದಿಂದ ರಿಡೈರೆಕ್ಟ್ ಆದಂತಹ ಹಣ. ನೀವು ಅದನ್ನು ಬಳಸೋದು ತಪ್ಪಲ್ಲವೆ?'' ಎಂದು ಪ್ರಶ್ನೆಯನ್ನು ಎಸೆದ. ಅದಾಗಲೇ ಮದರ್ ಎಲಿಸಾ ನಿಧಾನಕ್ಕೆ ಕೆಳಗಿಳಿದು ಬಂದಿದ್ದರು. ಅವನ ಪ್ರಶ್ನೆಯ ಜೊತೆಯಲ್ಲಿಯೇ ಇನ್ನಷ್ಟು ಜನರ ಪ್ರಶ್ನೆ ಬೆರೆತ ಕಾರಣ ಎಲಿಸಾರಿಗೆ ಪ್ರಶ್ನೆ ಕೇಳಿಸಲಿಲ್ಲ. ಬಂದ ವರದಿಗಾರರಿಗೆಲ್ಲ ಅಡ್ಡಲಾಗಿ ಸಿಎಂಸಿ ನನ್‌ಗಳು ನಿಂತಿದ್ದರು. ಅದರಲ್ಲಿ ಮೂರನೆಯವಳಾಗಿ ಸಿ. ರೋಣ ಇದ್ದಳು. ಸ್ವಲ್ಪ ನುಗ್ಗಿ ಬಂದು ಅದೇ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿದ. ''ನಾನು ಉತ್ತರಿಸಬೇಕಾದ ಪ್ರಶ್ನೆಯಲ್ಲ ಇದು'' ಎಂದು ಮದರ್ ಎಲಿಸಾ ಒಣಗಿದ ದನಿಯಲ್ಲಿ ಹೇಳಿದರು. ಸರ್ವಾಧಿಕಾರಿಯು ಸಿಎಂಸಿಗೆ ನೀಡಿದ ದಾನದ ಹಣಕ್ಕೆ ಸರಿಯಾದ ಲೆಕ್ಕವಿರದಿದ್ದ ಕಾರಣ ದೊಡ್ಡದೊಂದು ಹಗರಣವೆಂಬಂತೆ ಪಶ್ಚಿಮದಲ್ಲಿ ಸುದ್ದಿ ಹರಡಿತ್ತು. ಇದರ ಬಗ್ಗೆ ಮಾಹಿತಿ ಇದ್ದರೂ ಸಿಎಂಸಿ ಪ್ರತಿಕ್ರಿಯಿಸಿರಲಿಲ್ಲ. ಇದಕ್ಕೆ ಅನುಗುಣವಾಗಿ ಕಳೆದ ವರ್ಷ ಸರ್ವಾಧಿಕಾರಿಯ ಜೊತೆ ಮದರ್ ಎಲಿಸಾ ಫೋಟೋ ತೆಗೆಸಿಕೊಂಡು, ಅವನ ಆಹ್ವಾನದ ಮೇರೆಗೆ ಅವನ ದೇಶಕ್ಕೆ ಕೂಡ ಹೋಗಿ ಗರ್ಭಪಾತದ ವಿರುದ್ಧವಾಗಿ ಸಿಎಂಸಿಯ ಕೆಲಸದ ಬಗ್ಗೆಯೆಲ್ಲಾ ಮಾತನಾಡಿ ಬಂದಿದ್ದರು. ಪಶ್ಚಿಮದ ಮಾಧ್ಯಮಗಳ ಈ ಅತಿರೇಕವನ್ನು ಸಿಎಂಸಿ ಅನುಭವಿಸಬೇಕಾಗಿತ್ತು. ''ಮಾಫಿಯಾ ಹಣದಿಂದ ಇದೆಲ್ಲ ನಡೆಸಬೇಕೆ? ಮಾಫಿಯಾಗಳಿಗೆ ಕುಮ್ಮಕ್ಕು ಕೊಟ್ಟಂತಲ್ಲವೇ?'' ಎಂದು ಇನ್ನೊಬ್ಬ ಯೂರೋಪಿಯನ್ ಪತ್ರಕರ್ತ ಗುಡುಗಿದ. ''ಎಲ್ಲರೂ ದೇವರ ಮಕ್ಕಳು. ನಾವು ಯಾರನ್ನೂ ದಾನ ಕೇಳೋಲ್ಲ, ಕೊಟ್ಟರೆ ಬೇಡವೆನ್ನೋಲ್ಲ. ಅವರನ್ನು ಪರೀಕ್ಷಿಸೋದು ನಮ್ಮ ಕೆಲಸವಲ್ಲ. ಬಡವರಲ್ಲಿ ಕಡು ಬಡವರಿಗೆ, ನೊಂದವರಲ್ಲಿ ಅತಿ ನೊಂದವರಿಗೆ ಪ್ರೀತಿ ಕೊಡುವುದು ನಮ್ಮ ಕೆಲಸ'' ಮದರ್ ಎಲಿಸಾ ಇಷ್ಟನ್ನು ವಿನಮ್ರವಾಗಿ ಮುಗಿಸುವ ಹೊತ್ತಿನಲ್ಲೇ ಅರ್ಧಕ್ಕೆ ತಡೆದ ಪತ್ರಕರ್ತ ''ಅದೇ ಕಡುಬಡವರನ್ನು ಕೊಂದ ಸರ್ವಾಧಿಕಾರಿಯ ಹಣ ಅದು'' ಎಂದ. ಅವನ ಪ್ರಶ್ನೆಗೆ ಉತ್ತರಿಸದೆ, ಬೇರೆಯವರೆಡೆಗೆ ಎಲಿಸಾ ಕೈ ಮಾಡಿದರು. ಬಾಬ್‌ಕಟ್ ಮಾಡಿಸಿ, ಸ್ಕರ್ಟ್ ತೊಟ್ಟಿದ್ದ ಅಮೆರಿಕನ್ ಪತ್ರಕರ್ತೆ ''ಕಳೆದ ವರ್ಷ ಸಿಎಂಸಿಯ ನನ್ ಒಬ್ಬರು ಶಿಶುಮಂದಿರದ ಮಕ್ಕಳನ್ನು ದತ್ತು ಕೊಡುವ ಬದಲು ದುಡ್ಡಿಗೆ



ಮಾರಿದ್ದರಂತೆ!'' ಎಂದು ಮುಖವನ್ನು ಬೆಪ್ಪು ಮೋರೆ ಮಾಡಿಕೊಂಡು ಕೇಳಿದಳು. ಮದರ್ ಎಲಿಸಾ ''ಇಲ್ಲ'' ಎಂದರು. ಅದೇ ಎತ್ತರದ ವ್ಯಕ್ತಿ ''ಯೂರೋಪಿನಲ್ಲಿ ನಡೆದ ಸಭೆಯಲ್ಲಿ ಹಿರೋಶಿಮಾ ನಾಗಸಾಕಿ ಜನರ ಬಗ್ಗೆ ಅನುಕಂಪ ತೋರಿಸಿ ಪ್ರಾರ್ಥನೆ ಮಾಡಿದ ನೀವು, ಅಮೆರಿಕಾದ ವಿರುದ್ಧ ಒಂದೂ ಮಾತನಾಡಲಿಲ್ಲ ಯಾಕೆ? ಶಾಂತಿ ಪ್ರಶಸ್ತಿ ಸಿಗಲೆಂದು ನಿಮಗಾಗಿ ಲಾಬಿ ಮಾಡುತ್ತಿರುವ ಅಮೆರಿಕನ್ ಪ್ರಭಾವಿ ಕ್ಯಾಥೋಲಿಕ್ಕರು ಬೇಜಾರು ಮಾಡಿಕೊಳ್ಳುತ್ತಾರೆ ಎಂದೇ?'' ಎಂದು ಸೊಟ್ಟ ತಲೆ ಮಾಡಿದ. ಮದರ್ ಎಲಿಸಾರ ಗೆರೆ ಮೂಡಿದ ಮುಖ ಚದುರುತ್ತಿತ್ತು. ಎಲಿಸಾರ ಕಣ್ಣುಗಳು ಓರೆಯಾಗಿ ಅವನನ್ನೇ ನೋಡುತ್ತಿದ್ದವು. ''ಅಸಂಬದ್ಧ ಪ್ರಶ್ನೆ'' ಎಂದು ಗಟ್ಟಿಯಾಗಿ ಮಹಡಿಯ ಕಡೆಗೆ ನಡೆದುಬಿಟ್ಟರು. ಗೇಟ್‌ಕೀಪರ್ ಸೇರಿದಂತೆ ಉಳಿದ ನನ್‌ಗಳು ಹೊರಹೋಗುವಂತೆ ಮಾಧ್ಯಮದವರಲ್ಲಿ ವಿನಂತಿ ಮಾಡಿಕೊಂಡರು. ಗಂಡಸು ಆಳುಗಳು ಕ್ಯಾಮೆರಾದವರ ಮುಂದೆ ಅಡ್ಡ ನಿಂತರು. ಹದಿನೈದು ನಿಮಿಷದ ಮಾತುಕತೆಯ ನಂತರ ಬಲವಂತವಾಗಿ ಮಾಧ್ಯಮದವರನ್ನು ಹೊರಗೆ ಕಳಹಿಸಲಾಯಿತು. ರೋಣಾಳಿಗೆ ಆಶ್ಚರ್ಯ ತಡೆಯಲಾಗಲಿಲ್ಲ.ಮಿಲ್ಟನ್ ಫಾಬ್ರಿಗಾಸನ ಬಗೆಗಿದ್ದ ಆಪ್ತತೆ ಹೆಚ್ಚುವಂತ ಆಶ್ಚರ್ಯವದು. ಕೊನೆ ಭೇಟಿಯಲ್ಲಿ ಅವನು ತಿಳಿಸಿದ್ದ. ''ಮುಂದಿನ ವರ್ಷದ ಶಾಂತಿ ಪ್ರಶಸ್ತಿ ಮದರ್ ಎಲಿಸಾರವರಿಗೆ ಬರುತ್ತದೆ ನೋಡುತ್ತಲಿರು'' ಎಂದು. ಮದರ್ ಎಲಿಸಾರ ಹಿಂದೆ ಇಷ್ಟೆಲ್ಲಾ ಸೂತ್ರಧಾರಿಗಳು ಇದ್ದಾರೆಂಬ ಕಲ್ಪನೆಯೇ ಅವಳಿಗೆ ಅರಗಿಸಿಕೊಳ್ಳಲಾಗಲಿಲ್ಲ. ಆದರೆ ಯಾವುದರ ಬಗ್ಗೆಯೂ ಅವಳಿಗೆ ಸ್ಪಷ್ಟತೆ ಇರಲಿಲ್ಲ. ಮದರ್ ಎಲಿಸಾರಲ್ಲೇ ಈ ಬಗ್ಗೆ ಕೇಳಿದರೆ ಹೇಗಿರುತ್ತದೆ ಎಂದು ಆಲೋಚಿಸಿದಳು. ಅದೊಂದು ಅನಪೇಕ್ಷಿತ ನಡೆಯಾಗುತ್ತದೆಯೆಂದು ಅವಳಿಗನ್ನಿಸಿತು. ಈ ಬಗ್ಗೆ ಯಾರ ಬಳಿ ಹಂಚಿಕೊಳ್ಳುವುದು? ಕುತೂಹಲ ತಣಿಸಿಕೊಳ್ಳುವ ಕ್ರಿಯೆಗೆ ಯಾರು ಸೂಕ್ತ ಎಂದು ಹುಡುಕಲಾರಂಭಿಸಿದಳು. ಮೊದಲಿಗೆ ಸಿ. ಶುಭಾ ಎಂದು ನೆನಪಿಗೆ ಬಂದರೂ, ಅವಳು ತನಗೇ ಬೈದಾಳು ಎಂಬ ಭಯದಿಂದ ಆಯ್ಕೆಯನ್ನು ಬಿಟ್ಟಳು. ಇನ್ನು ಫಾಬ್ರಿಗಾಸ್, ಅವನು ಫೋನಿಗೆ ಸಿಗುವುದಿಲ್ಲ. ಪತ್ರ ಬರೆದರೆ ಯಾವಾಗ ವಾಪಾಸು ಬರೆಯುತ್ತಾನೆ ಎಂಬ ಅಂದಾಜಿರುವುದಿಲ್ಲ. ಕಛೇರಿಯ ಮೇಜಿನ ಬಳಿ ಕುಳಿತುಕೊಳ್ಳುವಾಗ ಈ ಚೆರ‍್ರಿಲೌಡನ್ನಿನ ಪತ್ರವನ್ನು ನೆಪವಾಗಿಟ್ಟುಕೊಂಡು ಮದರ್ ಎಲಿಸಾರ ಬಳಿಯೇ ಹೋಗುವುದು ಸೂಕ್ತ ಎಂದು ನಿರ್ಧರಿಸಿಕೊಂಡಳು.

★★★

ಕಲ್ಕತ್ತೆಯ ಜನ ಹಾಗೂ ಸಿಎಂಸಿ ನನ್‌ಗಳು ಮದರ್ ಎಲಿಸಾ ಬಡರೈತ ಕುಟುಂಬದಿಂದ ಬಂದ ಹೆಂಗಸು ಎಂದೇ ಅಂದುಕೊಂಡಿದ್ದರು. ಈವರೆಗೂ ಅವರು ಕಂಡಿದ್ದ ಎಲಿಸಾರ ಬಗೆಗಿನ ಸಾಕ್ಷ್ಯಚಿತ್ರವೂ ಅದನ್ನೇ ಹೇಳಿತ್ತು. ಭಾರತದಂತಹ ದೇಶದಲ್ಲಿ ರೈತಾಪಿವರ್ಗಕ್ಕೆ ಸೇರಿದ ಹೆಣ್ಣುಮಗಳು ಎಂಬುದನ್ನು ಒತ್ತಿ ಹೇಳಲಾಯಿತು. ಇದನ್ನು ಮೊದಲಾಗಿ ಥಾಮಸ್ ಬೆಂಜಮೀನ್ "ಎ ಟ್ರಿಬ್ಯೂಟ್ ಟು ಗಾಡ್"ನಲ್ಲಿ ತೋರಿಸಿದ್ದ. ಮೂಲವಾಗಿ ಮದರ್ ಎಲಿಸಾರ ಕುಟುಂಬ, ಇಟಲಿಯ ವೆನ್ನಿಸ್‌ನಿಂದ ಅಲ್ಬೇನಿಯಾಕ್ಕೆ ವಲಸೆ ಬಂದ ವ್ಯಾಪಾರಸ್ಥ ಕುಟುಂಬವಾಗಿತ್ತು. ಚಿಕ್ಕಂದಿನಿಂದಲೂ ಕ್ಯಾಥೋಲಿಕ್ ಸಂಸ್ಕೃತಿಯ ಬಗ್ಗೆ ಆಕೆಗೆ ಸಹಜವಾದ ಗೌರವವಿತ್ತು. ಕ್ರೈಸ್ತ ಆಧ್ಯಾತ್ಮದ ಬಗ್ಗೆ ಹೆಚ್ಚಾಗಿ ಓದಿಕೊಂಡ ನಂತರ ಅತಿ ಕಿರಿಯ ವಯಸ್ಸಿನಲ್ಲೇ ದಿವ್ಯ ಆದೇಶಕ್ಕೆ ಬದ್ಧಳಾಗಿ ಹೊರಟಿದ್ದರು ಮದರ್ ಎಲಿಸಾ. ಶಿಕ್ಷಕಿಯಾಗಿ ಕಾನ್ವೆಂಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಎಲಿಸಾ, ಭಾರತ ಪಾಕಿಸ್ತಾನದ ಬೇರೆ ಆದ ಸಂದರ್ಭದಲ್ಲಿ ಆದ ಸಾವುನೋವನ್ನು ಕಣ್ಣಾರೆ ಕಂಡವರು. ಕಲ್ಕತ್ತೆಯ ಅಶಕ್ತರಿಗಾಗಿ ಆಗಿನಿಂದಲೇ ಕಾರ್ಯಪ್ರವೃತ್ತಳಾದೆ ಎಂದು ಇಂದಿಗೂ ಮದರ್ ಎಲಿಸಾ ಹೇಳುವುದುಂಟು. ಮದರ್ ಎಲಿಸಾ ಸಾಂಸ್ಕೃತಿಕವಾಗಿ ಅಲ್ಬೇನಿಯನ್ನಳು. ಮೊದಲು ವಾಸವಿದ್ದುದ್ದು ಮಸೆಡೋನಿಯಾದ ಉತ್ತರದ ಸಕೋಪ್ಜೆ ಪ್ರದೇಶದಲ್ಲಿ. ಸಂಜೆಯ ಪ್ರಾರ್ಥನೆ ನಂತರ ಮದರ್ ಎಲಿಸಾ ಸಿಸ್ಟರ್ ಸೋಫಿ ಒಟ್ಟಿಗೆಯೇ ಮೇಲಿನ ಕೋಣೆಯಲ್ಲಿ ಚರ್ಚಿಸುತ್ತಾ ಕುಳಿತಿದ್ದರು. ಸಮಯವನ್ನು ನೋಡಿ ಕಾಲನ್ನು ಹಿಂದು ಮುಂದು ಮಾಡಿ, ನಂತರ ದೃಢವಾಗಿಸಿಕೊಂಡು, ಕ್ಷಣಕ್ಕೊಮ್ಮೆ ಕೈ ಒರೆಸಿಕೊಂಡು ಸಿ.ರೋಣ ಪತ್ರದೊಂದಿಗೆ ಮೆಟ್ಟಿಲನ್ನು ಏರಿ, ಅವರಿಬ್ಬರ ಚರ್ಚೆಯ ಮಧ್ಯದಲ್ಲಿ ಅಡ್ಡಲಾಗಿ ಒಳಬರಬಹುದೇ ಎಂದು ಕೋಣೆಯ ಬಾಗಿಲ ಬಳಿ ನಿಂತಳು. ಸಿ.ಸೋಫಿ ನಗುವಿನ ಮುಖದಿಂದ ಒಳಗೆ ಬಾ ಎಂಬಂತೆ ಸೂಚಿಸಿದರು. ''ಮದರ್ ನೋಡಿ, ರೋಣ ಈ ನಡುವೆ ಎಷ್ಟು ಗೆಲುವಾಗಿದ್ದಾಳೆ. ಮಕ್ಕಳಿಗಂತೂ ರೋಣ ಎಂದರೆ ಅಷ್ಟು ಪ್ರೀತಿ'' ಎಂದು ಹೊಗಳಿಕೆ ನೀಡಿದರು. ಸಮಯವಲ್ಲದ ಸಮಯದ ಹೊಗಳಿಕೆ ಅದೆಷ್ಟು ಸತ್ಯಗಳನ್ನು ಹೊಸಕಿ ಬಿಡುತ್ತದೆ, ಎಂದು ಆ ಸಮಯಕ್ಕೆ ರೋಣಾಳಿಗೆ ಅನ್ನಿಸಿತು. ಪತ್ರವನ್ನು ತೋರಿಸಲೇ ಬೇಡವೇ ಎಂಬ ಸಂಕಟ ಈ ಹೊಗಳಿಕೆಯೊಂದಿಗೆ ಹುಟ್ಟಿಕೊಂಡಿತ್ತು. ಒತ್ತಾಯದ ನಗುವನ್ನು, ಕುಶಲೋಪರಿಯನ್ನು ತಂದುಕೊಳ್ಳುವುದು ಅನಿವಾರ್ಯವಾಯಿತು. ಮದರ್ ಎಲಿಸಾರು ತಲೆ ತಗ್ಗಿಸಿಕೊಂಡೇ ಇವಳನ್ನು ಗಮನಿಸುತ್ತಿದ್ದರು. ಅವರ ಮುಂದೆ ಪತ್ರವನ್ನು ಇಡುವ ಧೈರ್ಯ ಮೂಡಲೇ ಇಲ್ಲ. ಒಂದು ಹಂತದಲ್ಲಿ ತಡೆಯಲಾರದೆ ಪತ್ರವನ್ನು ಸಿ.ಸೋಫಿಯ ಕೈಗೆ ನೀಡುತ್ತಾ ರೋಣ ''ಸಿಸ್ಟರ್ ಇಲ್ನೋಡಿ ಈ ಪತ್ರ, ಯಾವುದೋ ಸ್ವಯಂಸೇವಕಿ ಸಿಎಂಸಿ ಬಗ್ಗೆ ಹೇಗೆ ಬರೆದಿದ್ದಾಳೆ'' ಎಂಬ ಹುಸಿ ಆತಂಕದ ದನಿಯಲ್ಲಿ ಕತ್ತು ಮೇಲೆ ಮಾಡಿದಳು. ಸಿ.ಸೋಫಿ ಪಕ್ಕದಲ್ಲಿದ್ದ ಕನ್ನಡಕವನ್ನು ಹಾಕಿಕೊಂಡು ಕಣ್ಣಾಡಿಸಿದರು. ಅವರ ಮುಖದಲ್ಲಿ ಏನಾದರು ಬದಲಾವಣೆ ಇದೆಯೆ ಎಂದು ವೀಕ್ಷಿಸುವುದು ರೋಣಾಳ ಆದ್ಯ ಕೆಲಸದಂತಿತ್ತು. ಅವರು ಕಣ್ಣೆತ್ತಿ ರೋಣಾಳನ್ನು ನೋಡಿದ ಕೂಡಲೇ ಅವರನ್ನು ನೋಡುತ್ತಿದ್ದ ರೋಣ ಆಚೀಚೆ ತಲೆ ಮಾಡಿಕೊಂಡಳು. ಮದರ್ ಎಲಿಸಾ ಸಂಜೆಗತ್ತಲಿನ ಕೇಸರಿ ಕಿರಣಗಳ ನಡುವಿನಲ್ಲಿ ರೋಸರಿ ಹಿಡಿದು ತುಟಿಯನ್ನು ಆಡಿಸುತ್ತಿದ್ದರು. ಸಿ.ಸೋಫಿ ಪತ್ರವನ್ನು ಎಲಿಸಾರ ಮುಂದಿಟ್ಟು, ಎದ್ದು ಬಲ್ಬಿನ ಸ್ವಿಚ್ಚನ್ನು ಹಾಕಿದರು. ಕೇಸರಿ ಕಿರಣಗಳು ಮಾಯವಾಗಿ ಕೋಣೆಯಲ್ಲಿ ಬೆಳಕು ಹರಡಿತು. ಮದರ್ ಎಲಿಸಾ ಅದನ್ನು ಕಣ್ಣೆತ್ತಿ ಸಹ ನೋಡಲಿಲ್ಲ. ''ಪ್ರಭು, ಈ ಮಕ್ಕಳನ್ನು ಕ್ಷಮಿಸು. ಅವರು ಏನು ಮಾಡುತ್ತಿದ್ದಾರೆ ಎಂಬ ಅರಿವು ಅವರಲಿಲ್ಲ. ಕ್ಷಮಿಸು ಪ್ರಭು'' ಎಂದು ಕೈ ಮುಗಿದುಕೊಂಡರು. ಸಿ.ರೋಣ ಇದನ್ನು ನಿರೀಕ್ಷಿಸುತ್ತಿದ್ದಳು. ಮಾತನ್ನು ಮುಂದುವರಿಸಲು ಸ್ವಲ್ಪ ಮುಂದೆ ಬಂದು ''ಮದರ್, ನಿಮಗೆ ಶಾಂತಿ ಪ್ರಶಸ್ತಿ ಕೊಡಬೇಕಾದದ್ದೇ. ಅದರಲ್ಲಿ ತಪ್ಪೇನಿದೆ? ಇಂಥಾ ಸೇವೆಯನ್ನು ಮತ್ತಿನ್ಯಾರು ಮಾಡಿದ್ದಾರೆ?'' ಎಂದು ತಕ್ಷಣ ''ಕ್ರಿಸ್ತನು ಮಾಡಿದ್ದಾನೆ'' ಎಂದು ಎಲಿಸಾ ಉತ್ತರಿಸಿದರು. ನನ್ನ ಮಾತು ನಾಟಕೀಯವಾಗಿತ್ತು ಎಂದು ತತ್‌ಕ್ಷಣದಲ್ಲೇ ಅವಳಿಗೆ ಅರಿವಾಯಿತು. ಅದನ್ನು ಸರಿಪಡಿಸಲು ''ಮದರ್, ನಾವೇಕೆ ಆಸ್ಪತ್ರೆ ಕಟ್ಟಿಸಬಾರದು? ಎಲ್ಲರಿಗೂ ಅನುಕೂಲವಾಗುತ್ತದೆ'' ಎಂದು ಉಮ್ಮೇದಿನಲ್ಲಿ ಅಂದಳು. ಮದರ್ ಎಲಿಸಾ ನಿಧಾನವಾಗಿ ಮೇಲೆದ್ದರು. ಸಿ.ಸೋಫಿಯನ್ನು ಹಿಂದೆ ಬಿಟ್ಟು ಮುಂದೆ ಬಂದರು. ''ಎಲ್ಲವನ್ನೂ ಮಾಡಬಹುದು, ಆದರೆ ಮಾಡಲಿಕ್ಕೆ ನಮಗೇನಿದೆ? ಎಲ್ಲವನ್ನೂ ಅವನು ಮಾಡಿಸುತ್ತಾನೆ. ಜಗತ್ತಿನಲ್ಲಿ ಯಾವುದೂ ಆಕಸ್ಮಿಕವಲ್ಲ. ಎಲ್ಲವೂ ಅವನದ್ದೇ. ಅವನು ಆಸ್ಪತ್ರೆ ಕಟ್ಟಿಸುತ್ತಾನೆ. ಅವನೇ ಎಲ್ಲರನ್ನೂ ಕಾಪಾಡುತ್ತಾನೆ. ನಾವೇನೂ ಮಾಡುವುದು ಬೇಕಾಗಿಲ್ಲ. ಅವನನ್ನು ಪ್ರಾರ್ಥಿಸಬೇಕಷ್ಟೆ. ಅವನಿಗೆ ಬೇಡವೆನಿಸಿದೆ ಅದಕ್ಕೆ ಮಾಡಿಲ್ಲ. ಅವನಿಗೆ ಆಗದ್ದು ನಿನ್ನಿಂದ ಸಾಧ್ಯವಾ?'' ಎಂದು ಮರುಪ್ರಶ್ನೆ ಮಾಡಿದರು. ಬೈಬಲ್ಲಿನ ಸಂಗತಿಯನ್ನೇ (ಲೂಕ್ 22:42) ನನಗೆ ಮತ್ತೊಮ್ಮೆ ಹೇಳಿ, ನನ್ನ ಮಾತನ್ನು ತೆಗೆದು ಬಿಸಾಡುತ್ತಿದ್ದಾರೆ ಎಂದು ಅವಳಿಗೆ ಅರ್ಥವಾಯಿತು. ಬೇರೊಂದು ಮಾತಾಡಲು ಸಿಗದಂತೆ ಮಾತಿನ ರೆಕ್ಕೆಯನ್ನು ಕಡಿದು, ಅಂಗವಿಕಲ ಪಕ್ಷಿಯನ್ನು ಹಾರಿ ತೋರಿಸು ಎಂಬಂತೆ ಮದರ್ ಎಲಿಸಾ ಪ್ರಶ್ನೆಯನ್ನು ಒಡ್ಡಿದರು. ಆ ಕ್ಷಣದಲ್ಲಿ ಅಲ್ಲಿಗೆ ಬಂದ ಮತ್ತೊಬ್ಬ ನನ್ ಸಿ.ಸೋಫಿಯವರಿಗೆ ''ಮಹಡಿ ಮೇಲೆ ಪಾಟ್‌ಗಳಲ್ಲಿ ಹೂ ಬೆಳೆಸಿದ್ದಾರಲ್ಲ ಸಿ.ಶುಭಾ ಅವರಿಗೆ ಅದನ್ನು ತೆಗೀಬೇಕು ಅಂತ ತಿಳಿಸಿದೆ. ಅವರು ಸಿ.ಸೋಫಿ ಹೇಳಲಿ ಎಂದರು. ನೀವೇ ಹೇಳಿದರೆ ಒಳ್ಳೆಯದು'' ಎಂದು ವಿಷಾದವಾಗಿ ನುಡಿದಳು. ಸಿಎಂಸಿಯ ನಿಯಮದ ಪ್ರಕಾರ ಯಾವುದೇ ನನ್ ತನ್ನ ಸ್ವಂತಕ್ಕಾಗಿ ಏನನ್ನೂ ಬೆಳೆಸುವುದಕ್ಕಾಗಲೀ, ಸ್ವಂತದ್ದು ಎಂದು ವಸ್ತುವನ್ನು ಖರೀದಿಸುವುದಾಗಲೀ ಮಾಡುವಂತಿರಲಿಲ್ಲ. ಮದರ್ ಎಲಿಸಾ ಮಹಡಿಯ ಮೇಲೆ ಹೋಗೋಣವೆಂದು ಸೂಚಿಸಿದರು.